# ಅಂಗನವಾಡಿಗಳಲ್ಲಿ ಪರಿಸರ ಜಾಗೃತಿ

ಯೋಗೇಶ್ ಜಿ.ಆರ್.

ಹವಾಮಾನ ಬಿಕ್ಕಟ್ಟು (Climate crisis) ಹೆಚ್ಚಿನ ಪ್ರಮಾಣದ ಪರಿಣಾಮವನ್ನು ಪರಿಸರದ ಮೇಲೆ ಉಂಟುಮಾಡುತ್ತಿದ್ದು ಪರಿಸರದ ಬಗ್ಗೆ ಮಕ್ಕಳನ್ನು ಪ್ರಜ್ಞಾವಂತರನ್ನಾಗಿಸುವುದು ಮತ್ತು ಸಣ್ಣ ವಯಸ್ಸಿನಿಂದಲೇ ಅವರಿಗೆ ಸುಸ್ಥಿರತೆಯ ಬಗ್ಗೆ ಶಿಕ್ಷಣ ಕೊಡಬೇಕಾಗಿರುವುದು ಮಹತ್ವ ಹೆಚ್ಚಿಸಿಕೊಂಡಿದೆ. ತಮ್ಮ ಸುತ್ತಲಿನ ಪರಿಸರದ ಬಗ್ಗೆ ಕಾಳಜಿ ವಹಿಸುವ ಮತ್ತು ಕಾಪಾಡುವ ಅಭ್ಯಾಸವನ್ನು ಶಿಕ್ಷಣದ ಭಾಗವಾಗಿಸಿ, ಆ ಮೂಲಕ ಮಕ್ಕಳಲ್ಲಿ ಪರಿಸರ ಪರವಾದ ಸಹಾನುಭೂತಿಯ ಧೋರಣೆ ಬೆಳೆಸಬೇಕು.

'ನಿಪುಣ್ ಭಾರತ್' ಎಂದೇ ಹೆಸರಾಗಿರುವ 'ಅರ್ಥೈಸಿಕೊಂಡು ಓದುವುದು ಮತ್ತು ಸಂಖ್ಯಾ ಜ್ಞಾನದ ಗ್ರಹಿಕೆಯಲ್ಲಿ ನೈಪುಣ್ಯತೆಯ ರಾಷ್ಟ್ರೀಯ ಉಪಕ್ರಮ'ವು (National Initiative for Proficiency in Reading with Understanding and Numeracy - NIPUN Bharat) ಮೂಲಭೂತ ಸಾಕ್ಷರತೆ (foundational literacy) ಮತ್ತು ಸಂಖ್ಯಾಜ್ಞಾನದ ಮೂಲಭೂತ ಕಲಿಕೆಯ ಫಲಿತಾಂಶಗಳನ್ನು ಮೂರು ಅಭಿವೃದ್ಧಿಯ ಗುರಿಗಳಾಗಿ ವರ್ಗೀಕರಿಸುತ್ತದೆ. 'ಮಕ್ಕಳು ಪರಸ್ಪರ ತೊಡಗಿಸಿಕೊಳ್ಳುತ್ತಾ ಕಲಿಯುತ್ತಾರೆ ಮತ್ತು ತಮ್ಮ ಸುತ್ತಲಿನ ಪರಿಸರದೊಂದಿಗೆ ಬೇಗನೆ ಸಂಪರ್ಕ ಸಾಧಿಸುತ್ತಾರೆ' ಎನ್ನುವುದು ಮೂರನೇ ಗುರಿಯಾಗಿದೆ. ಅಂಗನವಾಡಿ ಕೇಂದ್ರಗಳಲ್ಲಿ ಗಿಡ, ಮರ, ಪ್ರಾಣಿ, 'ಗಾಳಿ, ನೀರು ಮತ್ತು ಸುತ್ತಮುತ್ತಲ ಪರಿಸರ', ಹೂವು, ಹಣ್ಣು ಮೊದಲಾದ ವಿವಿಧ ವಸ್ತುಗಳ ರೂಪದಲ್ಲಿ ಈ ಸಂಪರ್ಕವೇರ್ಪಡುತ್ತದೆ. ಆರಂಭಿಕ ಶಿಕ್ಷಣವು ಮಗುವಿನ ಸಮಗ್ರ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ದೇಶದಾದ್ಯಂತ ಅಂಗನವಾಡಿ ಕೇಂದ್ರಗಳು ಅಂಗನವಾಡಿ ಶಿಕ್ಷಕರ ಜೊತೆ ಸೇರಿ ಸಾರ್ವಜನಿಕ ಆರಂಭಿಕ ಶಿಕ್ಷಣದ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಅವು ಕೇವಲ ಮಕ್ಕಳ ಶಾಲಾಪೂರ್ವ ಹಂತದ ಪೌಷ್ಟಿಕಾಂಶದ ಅಗತ್ಯವನ್ನಷ್ಟೇ ಪೂರೈಸುವುದಿಲ್ಲ. ಬದಲಾಗಿ, ಮಕ್ಕಳ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನೂ ಪೂರೈಸುತ್ತವೆ. ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಸುತ್ತಲಿನ ಪರಿಸರದೊಂದಿಗೆ ಸುಲಭವಾಗಿ ಸಂಪರ್ಕ ಸಾಧಿಸಬಲ್ಲರು. ಹಾಗಾಗಿ, ಅಂಗನವಾಡಿ ಶಿಕ್ಷಕರು ಮಕ್ಕಳಿಗೆ ಪರಿಸರ ನಡಿಗೆ (nature walks) ಮತ್ತು ಕ್ಷೇತ್ರ ಭೇಟಿ ಮೊದಲಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಸ್ಥಳೀಯ ಜೀವಿಗಳ ವಾಸಸ್ಥಾನಗಳನ್ನು ಗಮನಿಸಿ ಹೊಸ ವಿಷಯಗಳ ಬಗ್ಗೆ ತಿಳಿದುಕೊಳ್ಳುವಂತೆ ಮಾಡಬಹುದು. ಇದು ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಬೆಳೆಸುವ ನಿಟ್ಟಿನಲ್ಲಿ ಅಡಿಪಾಯವಾಗುತ್ತದೆ.

## ವಿಷಯಾಧಾರಿತ ಪಠ್ಯಕ್ರಮ

ಹಲವು ರಾಜ್ಯಗಳು, ಮಕ್ಕಳ ಬೆಳವಣಿಗೆಗೆ ಪೂರಕವಾದ ವಿಷಯಾಧಾರಿತ ಪಠ್ಯಕ್ರಮವನ್ನು ಪ್ರತಿ ವರ್ಷ ಅನುಷ್ಠಾನಕ್ಕೆ ತಂದಿವೆ. ಮಕ್ಕಳ ಆಸಕ್ತಿ, ಸಂಸ್ಕೃತಿ ಮತ್ತು ಪರಿಸರವನ್ನು ಅವಲಂಬಿಸಿಕೊಂಡು ಈ ವಿಷಯಗಳನ್ನು ಆರಿಸಲಾಗುತ್ತದೆ. ಪಠ್ಯಕ್ರಮದ ವಸ್ತು/ವಿಷಯ ಅವರ ಬದುಕಿಗೆ ಹತ್ತಿರವಾಗಿರುವ ಕಾರಣ, ಮಕ್ಕಳು ಅದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ತೆಲಂಗಾಣ ರಾಜ್ಯದ ಇಸಿಇ ಪಠ್ಯಕ್ರಮದ (ಆರಂಭಿಕ ಬಾಲ್ಯ ಶಿಕ್ಷಣ) 14 ವಿಷಯಗಳಲ್ಲಿ 9 ವಿಷಯಗಳು ಪರಿಸರಕ್ಕೆ ಸಂಬಂಧಿಸಿದವು ಇವೆ. ನಿರ್ದಿಷ್ಟ ವಿಷಯಗಳನ್ನು ಆಧರಿಸಿದ ಸಂಭಾಷಣೆ, ಕತೆಗಳು, ಹಾಡುಗಳು, ನಾಟಕಗಳು ಮತ್ತು ಆಟಗಳನ್ನು ಅಂಗನವಾಡಿಗಳಲ್ಲಿ ಹೇಳಿಕೊಡಲಾಗುತ್ತದೆ. ಆ ಮೂಲಕ ಮಕ್ಕಳ ಕಲಿಕೆಯನ್ನು ಬಲಪಡಿಸಲಾಗುತ್ತದೆ. ಪ್ರಶ್ನೆ ಕೇಳುವ ಮತ್ತು ತಮ್ಮ ಸುತ್ತಲಿನ ಜಗತ್ತನ್ನು ಅರಿತುಕೊಳ್ಳುವ ಮೂಲಕ ಆ ಮಕ್ಕಳು ಕಲಿಯುತ್ತಾರೆ.

## ಅಭಿವೃದ್ಧಿ ಗುರಿ 3

### ಮಕ್ಕಳು ತಲ್ಲೀನ ಕಲಿಕಾರ್ಥಿಗಳಾಗುತ್ತಾರೆ ಮತ್ತು ತಮ್ಮ ತಕ್ಷಣದ ಪರಿಸರದೊಂದಿಗೆ ಬೆರೆಯುತ್ತಾರೆ (IL)

### ಪ್ರಮುಖ ಸಾಮಥ್ಯಗಳು

| ಇಂದ್ರಿಯಾತ್ಮಕ ಅನುಭವಗಳ ಬೆಳವಣಿಗೆ | ಸಂಜ್ಞಾನಾತ್ಮಕ ಕೌಶಲಗಳು | ಪರಿಸರ ಸಂಬಂಧಿ ಪರಿಕಲ್ಪನೆಗಳು |
|---|---|---|
| • ವೀಕ್ಷಣೆ, ಶಬ್ದ, ಸ್ಪರ್ಶ, ವಾಸನೆ, ರುಚಿ | • ಗಮನಿಸುವುದು, ಗುರುತಿಸುವುದು, ಸ್ಮರಣೆ, ಹೊಂದಿಸುವುದು, ವರ್ಗೀಕರಿಸುವುದು, ಮಾದರಿಗಳು, ಅನುಕ್ರಮ ಚಿಂತನೆ, ಸೃಜನಾತ್ಮಕ ಚಿಂತನೆ, ವೈಚಾರಿಕತೆ, ತಾರ್ಕಿಕತೆ, ಸಮಸ್ಯೆ ಪರಿಹಾರ, ಕುತೂಹಲ, ಪ್ರಯೋಗಶೀಲತೆ, ಅನ್ವೇಷಣೆ. | • ಪ್ರಾಕೃತಿಕ– ಪ್ರಾಣಿಗಳು, ಹಣ್ಣುಗಳು, ತರಕಾರಿಗಳು, ಆಹಾರ<br>• ಭೌತಿಕ– ನೀರು, ಗಾಳಿ, ಋತು, ಸೂರ್ಯ, ಚಂದ್ರ, ಹಗಲು ಮತ್ತು ರಾತ್ರಿ<br>• ಸಾಮಾಜಿಕ– ನನ್ನ ಬಗ್ಗೆ, ಕುಟುಂಬ, ಸಾರಿಗೆ, ಹಬ್ಬ, ಸಮುದಾಯ ಸಹಾಯಕರು ಇತ್ಯಾದಿ |

ತಮ್ಮ ಸನ್ನಿವೇಶಕ್ಕೆ ಮತ್ತು ಮಕ್ಕಳಿಗೆ ಹೊಂದುವಂತೆ ವಿಷಯ ವಸ್ತುವಿನಲ್ಲಿ ಅವಶ್ಯಕ ಮಾರ್ಪಾಡು ಮಾಡಿಕೊಳ್ಳುವ ಸ್ವಾತಂತ್ರ್ಯ, ಆಯಾ ಅಂಗನವಾಡಿ ಕೇಂದ್ರದ ಶಿಕ್ಷಕಿಯರಿಗೆ ಇದೆ. ಉದಾಹರಣೆಗೆ, ಬೇರೆ ಪ್ರದೇಶಗಳಲ್ಲಿರುವವುಗಳಿಗೆ ಪರ್ಯಾಯವಾಗಿ ಸ್ಥಳೀಯವಾಗಿ ಸಿಗುವ, ಮಕ್ಕಳು ದಿನನಿತ್ಯ ನೋಡುವ, ಪರಿಚಿತವಾದ ಹಣ್ಣು, ತರಕಾರಿ, ಮರಗಳು ಮತ್ತು ಪ್ರಾಣಿಗಳ ಮಾಹಿತಿಯನ್ನು ಶಿಕ್ಷಕರು ಆಯಾ ಪ್ರದೇಶಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಕಲಿಸುತ್ತಾರೆ. ಉತ್ತರ ಭಾಗದಲ್ಲಿರುವ ಮಗುವಿಗೆ ಗೊಂಗುರ ಎಲೆಗಳ ಬಗ್ಗೆ ತಿಳಿದಿರುವುದಿಲ್ಲ, ಆದರೆ ತೆಲಂಗಾಣದ ಮಗುವಿಗೆ ಅದು ಚಿರಪರಿಚಿತವಾಗಿರಬಹುದು. ಮಕ್ಕಳು ತಾವು ಕಲಿತ ಸಂಗತಿಗಳನ್ನು ನಿಜ ಬದುಕಿನ ಅನುಭವಗಳಿಗೆ ಬೆಸೆಯಬಹುದು. ಅಂದರೆ ಅವರಿಗೆ ತಿಳಿದಿರುವ ವಿವರಗಳ ಮುಖೇನ ಅವರು ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. ಇದು ಕಲಿಕೆಯನ್ನು ಹೆಚ್ಚು ಅರ್ಥಪೂರ್ಣ ಮತ್ತು ಆಸಕ್ತಿದಾಯಕವಾಗಿಸುತ್ತದೆ. ಹೀಗೆ, ವಿಷಯಾಧಾರಿತ ಕಲಿಕೆಯು ಮಕ್ಕಳು ತಮ್ಮ ಪರಿಸರದ ಬಗ್ಗೆ ಜಾಗೃತಿಯನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ.

ಈ ವಿಷಯಗಳನ್ನು ಬಳಸಿಕೊಂಡು ಶಿಕ್ಷಕಿಯರು, ಲಭ್ಯವಿರುವ ಸಂಪನ್ಮೂಲಗಳಲ್ಲೇ 'ಕಡಿಮೆ ಬಳಸು–ಮರುಬಳಸು–ಪುನರ್ಬಳಕೆ' ಯಂತಹ (reduce-reuse-recycle) ಸುಸ್ಥಿರತೆಯ ಪರಿಕಲ್ಪನೆಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಸಕ್ರಿಯವಾಗಿ ಸಣ್ಣ ಮಕ್ಕಳಿಗೆ ಹಮ್ಮಿಕೊಳ್ಳಬಹುದು. ಇಂಧನ ಮತ್ತು ನೀರಿನ ಸಂರಕ್ಷಣಾ ತಂತ್ರಜ್ಞಾನಗಳು ಅಂದರೆ, ಮನೆ ಮತ್ತು ಅಂಗನವಾಡಿ ಕೇಂದ್ರದಲ್ಲಿ ನೀರಿನ ಕೊಳಾಯಿ, ವಿದ್ಯುತ್‌ದೀಪ ಮತ್ತು ಫ್ಯಾನ್‌ಬಳಸದೇ ಇರುವಾಗ ಅವುಗಳನ್ನು ಸ್ವಿಚ್‌ಆಫ್‌ಮಾಡಬೇಕು ಎಂದು ಮಕ್ಕಳಿಗೆ ಪದೇಪದೇ ಹೇಳುತ್ತಾ ಅಂತಹ ಅಭ್ಯಾಸಗಳನ್ನು ಹವ್ಯಾಸವಾಗಿಸಬಹುದು.

ಪರಿಸರ ಕಾಳಜಿಯ ವಿಷಯವನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಕೆಲವು ಚಿತ್ರಣಗಳನ್ನು ನೀಡಲಾಗಿದೆ. ಇಂತಹ ಚಟುವಟಿಕೆಗಳ ಬಗ್ಗೆ ಅಂಗನವಾಡಿಯಲ್ಲಿ ಸಣ್ಣ ಮಕ್ಕಳಿಗೆ ಹೇಳಿಕೊಟ್ಟರೆ ಅದರ ಪರಿಣಾಮ ಹೇಗಿರಬಹುದು ಮತ್ತು ಅಂಗನವಾಡಿ ಶಿಕ್ಷಕಿಯರು ಕೇಂದ್ರದಲ್ಲಿ ಏನು ಮಾಡುತ್ತಾರೆ ಎಂಬ ಬಗ್ಗೆ ವಿವರಿಸಲಾಗಿದೆ.

### ಗಿಡಗಳು ಮತ್ತು ಮರಗಳು

ವಿಶೇಷವಾಗಿ ಗ್ರಾಮೀಣ ಭಾಗಗಳ ಹಲವು ಅಂಗನವಾಡಿ ಕೇಂದ್ರಗಳ ಆವರಣದಲ್ಲಿ ಗಿಡ ಮರಗಳಿರುತ್ತವೆ. ಶಿಕ್ಷಕಿಯರು ಕೇಂದ್ರದ ಮಕ್ಕಳನ್ನು ಹೊರಗೆ ಕರೆದುಕೊಂಡು ಹೋಗಿ ಆ ಗಿಡ, ಮರಗಳು ಮತ್ತು ಅವುಗಳ ವಿವಿಧ ಭಾಗಗಳನ್ನು ಗುರುತಿಸಲು ಹೇಳಿಕೊಡುತ್ತಾರೆ. ಬೇರೆಬೇರೆ ಮರಗಳನ್ನು ಮಕ್ಕಳಿಂದ ಮುಟ್ಟಿಸಿ, ಪ್ರತಿಯೊಂದರ ಗುಣಲಕ್ಷಣಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತಾರೆ.



ಚಿತ್ರ 1: ಅಂಗನವಾಡಿ ಕೇಂದ್ರವೊಂದರ ಆವರಣದಲ್ಲಿ ಮಕ್ಕಳು ಮರದ ತೊಗಟೆಯನ್ನು ಮುಟ್ಟಿ ಅದರ ಮೇಲ್ಮೈ ರಚನೆಯನ್ನು ತಿಳಿದುಕೊಳ್ಳುತ್ತಿರುವುದು.

ಗಿಡ–ಮರಗಳಿಂದ ಉದುರುವ ಒಣಗಿದ ಎಲೆಗಳು, ರೆಂಬೆಗಳು, ಬೀಜದ ಸಿಪ್ಪೆಗಳು ಮತ್ತು ಹೂವುಗಳನ್ನು ಸಣ್ಣ ಚೀಲವೊಂದರಲ್ಲಿ ಸಂಗ್ರಹಿಸುವಂತೆ ಶಿಕ್ಷಕಿ ಮಕ್ಕಳಿಗೆ ಹೇಳುತ್ತಾರೆ. ಕೇಂದ್ರಕ್ಕೆ ಮರಳಿದ ನಂತರ, ಸಂಗ್ರಹಿಸಿದ ಎಲ್ಲಾ ವಸ್ತುಗಳನ್ನು ಪ್ರತ್ಯೇಕಿಸಿ ಪ್ರತಿಯೊಂದನ್ನು ಹೆಸರು ಹಿಡಿದು ಗುರುತಿಸಲು ಶಿಕ್ಷಕಿ ನೆರವಾಗುತ್ತಾರೆ. ಬೀಜದ ಗೂಡು, ಸಿಪ್ಪೆಯನ್ನು ಒಡೆದಾಗ ಏನಾಗುತ್ತದೆ ಎಂದು ನೋಡುವಂತೆ ಮಕ್ಕಳನ್ನು ಉತ್ತೇಜಿಸುತ್ತಾರೆ.

ಈ ಸಂವಾದದ ಭಾಗವಾಗಿ ಶಿಕ್ಷಕರು, ತೋಟ ಮಾಡುವುದು ಮತ್ತು ಪೀಠೋಪಕರಣ, ಕಾಗದ, ಬಟ್ಟೆ ಮತ್ತು ಆಹಾರೋತ್ಪನ್ನಗಳ ಉತ್ಪಾದನೆಗೆ ಗಿಡ ಮರಗಳು ಹೇಗೆ ಬಳಕೆಯಾಗುತ್ತವೆ ಎಂಬುದರ ಬಗ್ಗೆ ಮಕ್ಕಳಿಗೆ ವಿವರಿಸುತ್ತಾರೆ. ನಮಗೆ ಶುದ್ಧ ಗಾಳಿ, ಮಳೆಗೆ ಗಿಡ ಮರಗಳು ಹೇಗೆ ಸಹಕಾರಿಯಾಗಿವೆ ಹಾಗೂ ಅವು ಹಕ್ಕಿಗಳಿಗೆ, ಕೀಟಗಳಿಗೆ ಗೂಡು ಕಟ್ಟಲು ಮತ್ತು ಪ್ರಾಣಿಗಳಿಗೆ ಆಸರೆಯಾಗಿರುವ ರೀತಿಯನ್ನು ವಿವರಿಸುತ್ತಾರೆ. ಒಟ್ಟಿನಲ್ಲಿ ಗಿಡ ಮರಗಳನ್ನು ನಾವು ರಕ್ಷಿಸುವುದು ಎಷ್ಟು ಅತ್ಯವಶ್ಯಕ ಎಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುತ್ತಾರೆ.

## ಪ್ರಾಣಿಗಳು

ಪ್ರಾಣಿಗಳು ಮಕ್ಕಳ ಜಗತ್ತಿನ ಅವಿಭಾಜ್ಯ ಅಂಗವಾಗಿದ್ದು, ಅವುಗಳಿಂದ ಆಕರ್ಷಿತರಾಗುತ್ತಾರೆ. ಮನೆಯಲ್ಲಿ ಸಾಕುಪ್ರಾಣಿಗಳಿದ್ದು, ತಮ್ಮ ಸುತ್ತಮುತ್ತಲಿನ ಪ್ರಾಣಿಗಳನ್ನೂ ಅವರು ಗಮನಿಸುತ್ತಿರುತ್ತಾರೆ ಅಥವಾ ಪುಸ್ತಕದಲ್ಲಿ ಚಿತ್ರ, ವ್ಯಂಗ್ಯಚಿತ್ರದ ಮೂಲಕ ಇಲ್ಲವೇ ಸಿನಿಮಾದಲ್ಲಿ ಅವರು ಪ್ರಾಣಿಗಳನ್ನು ನೋಡಿರುತ್ತಾರೆ. ಶಿಕ್ಷಕರು ಪ್ರಾಣಿಗಳ ಆಕಾರ, ಗಾತ್ರ, ಬಣ್ಣ ಮತ್ತು ಹವ್ಯಾಸಗಳ ರೂಪದಲ್ಲಿ ಗುರುತಿಸಲು ಮಕ್ಕಳಿಗೆ ನೆರವಾಗುತ್ತಾರೆ. ಅಲ್ಲದೆ, ತಮ್ಮ ಸುತ್ತಲಿರುವ ಪ್ರಾಣಿಗಳ ಬಗ್ಗೆ ನಾವು ಕರುಣೆ ಮತ್ತು ಕಾಳಜಿ ವಹಿಸಬೇಕಾದ ಅಗತ್ಯದ ಬಗ್ಗೆ ತಿಳಿಹೇಳುತ್ತಾರೆ. ಪ್ರಾಣಿಗಳ ಶಬ್ದಗಳನ್ನು ಮಕ್ಕಳು ಅನುಕರಣೆ ಮಾಡುವುದನ್ನು ಹೆಚ್ಚು ಸಂಭ್ರಮಿಸುತ್ತಾರೆ. ಶಿಕ್ಷಕರು ಮಿಂಚುಪಟ್ಟಿ (flashcards) ಇಲ್ಲವೇ ಪುಸ್ತಕಗಳ ನೆರವಿನಿಂದ ಕಾಡುಪ್ರಾಣಿಗಳು, ಅವುಗಳ ವಾಸಸ್ಥಾನ, ಅವುಗಳ ಆಹಾರ, ಸಂಚರಿಸುವ ಬಗೆ ಇತ್ಯಾದಿಯನ್ನು ವಿವರಿಸುತ್ತಾರೆ. ಪ್ರಾಣಿಗಳನ್ನು ಆಧರಿಸಿದ ಚಟುವಟಿಕೆಗಳು ಪ್ರಾಣಿಗಳು ನಮಗೆ ಎಷ್ಟು ಪ್ರಯೋಜನಕಾರಿ ಮತ್ತು ನಮಗೆಷ್ಟು ನೆರವಾಗುತ್ತವೆ ಎಂಬ ಬಗ್ಗೆ ಚರ್ಚಿಸಲು ಅವಕಾಶ ನೀಡುತ್ತವೆ. ಸಾಕುಪ್ರಾಣಿಗಳನ್ನು ತಮ್ಮ ಸುತ್ತಮುತ್ತಲೂ ನೋಡುತ್ತಾ, ಗಮನಿಸುತ್ತಾ ಮಕ್ಕಳು ಬೆಳೆಯುತ್ತಾರೆ ಹಾಗೂ ಅವುಗಳನ್ನು ಪ್ರೀತಿಸಲು ಮತ್ತು ಅವುಗಳ ಬಗ್ಗೆ ಅನುಕಂಪ ತೋರಲು ಕಲಿಯುತ್ತಾರೆ.

## ಗಾಳಿ, ನೀರು ಮತ್ತು ಪರಿಸರ

ಮಕ್ಕಳು, ವಿಜ್ಞಾನಿಗಳಂತೆ ತಮ್ಮ ಪರಿಸರದ ಬಗ್ಗೆ ಸಹಜ ಕುತೂಹಲ ಹೊಂದಿರುತ್ತಾರೆ. ಪ್ರತಿಯೊಂದರ ಆಗು–ಹೋಗುಗಳನ್ನು ಗಮನಿಸುವ ಅವರು, ಅದು ಹಾಗೆ ಯಾಕೆ ಆಗುತ್ತದೆ ಎಂದು ಕಲ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶಿಕ್ಷಕರು ಹೆಚ್ಚುಹೆಚ್ಚು ಅವಕಾಶಗಳನ್ನು ಸೃಷ್ಟಿಸುತ್ತಾ ಹೋದಂತೆಲ್ಲಾ ಮಕ್ಕಳು ತಮ್ಮ ಪರಿಸರದ ಬಗ್ಗೆ ಹೆಚ್ಚುಹೆಚ್ಚು ಸಂವೇದನಾಶೀಲರಾಗುತ್ತಾರೆ. ಮಕ್ಕಳನ್ನು ಪರಿಸರ ನಡಿಗೆಗೆ ಕರೆದುಕೊಂಡು ಹೋದಾಗ ಸ್ವಚ್ಛವಾದ ಮತ್ತು ಕೊಳಕು ಜಾಗಗಳನ್ನು ತೋರಿಸಿ, ಮನೆ, ಅಂಗನವಾಡಿ ಕೇಂದ್ರ ಮತ್ತು ಹೊರಗೆ ಶುಚಿತ್ವ ಕಾಪಾಡುವುದು ಎಷ್ಟು ಮುಖ್ಯ ಎಂದು ಮನವರಿಕೆ ಮಾಡಿಕೊಡುತ್ತಾರೆ.

ಕೇಂದ್ರದ ಆವರಣದಲ್ಲಿರುವ ಕಸಕಡ್ಡಿಗಳನ್ನು, ಬಾಟಲಿಗಳನ್ನು, ಪ್ಲಾಸ್ಟಿಕ್‌ಗಳನ್ನು ಎತ್ತಿ ಸ್ವಚ್ಛಗೊಳಿಸುವ ಮೂಲಕ ಅವರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುತ್ತಾರೆ. ಮಕ್ಕಳ ಮೂಲಕ ಅವರ ಕುಟುಂಬ ಮತ್ತು ನೆರೆಹೊರೆಯವರಿಗೂ ಸ್ವಚ್ಛತೆಯ ಅರಿವಿನ ಪಾಠ ಹೇಳಿಕೊಟ್ಟಂತಾಗುತ್ತದೆ.

ನೀರಿನ ಮಿತವ್ಯಯದ ವಿಷಯವನ್ನು ಹೇಳಿಕೊಡುವುದಕ್ಕೂ ಮೊದಲು ಶಿಕ್ಷಕರು, ನೀರನ್ನು ಯಾವ ಯಾವ ಕಾರಣಕ್ಕಾಗಿ ಬಳಕೆ ಮಾಡುತ್ತೇವೆ ಎಂದು ಹೆಸರಿಸುವಂತೆ ಮತ್ತು ನೀರಿನ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಲು ಮಕ್ಕಳನ್ನು ಪ್ರಶ್ನಿಸುವ ಮೂಲಕ ತಮ್ಮ ಸಂವಾದವನ್ನು ಆರಂಭಿಸುತ್ತಾರೆ. ಊಟಕ್ಕೆ ಮೊದಲು ಕೈ ತೊಳೆದುಕೊಳ್ಳುವಾಗ, ನೀರನ್ನು ವ್ಯರ್ಥ ಮಾಡದಂತೆ ಶಿಕ್ಷಕರು ತಿಳಿಹೇಳುತ್ತಾರೆ. ಕೈತೊಳೆದ ನೀರು ನೇರವಾಗಿ ಕೈತೋಟಕ್ಕೆ ಹರಿಯುವಂತೆ ಮಾಡುವ ಮೂಲಕ ನೀರಿನ ಮರುಬಳಕೆಯ ಬಗ್ಗೆ ತೋರಿಸಿಕೊಡುತ್ತಾರೆ. ಈ ರೀತಿಯ ಅಭ್ಯಾಸಗಳು ಮಕ್ಕಳಲ್ಲಿ ಪ್ರಾಕೃತಿಕ ಸಂಪನ್ಮೂಲಗಳ ಮಿತಬಳಕೆಯ ಬಗ್ಗೆ ಎಳೆಯ ವಯಸ್ಸಿನಲ್ಲಿಯೇ ಜಾಗೃತಿ ಮೂಡಿಸುತ್ತವೆ.

## ಪರಿಸರದ ಬಗ್ಗೆ ಸಂವೇದನೆ ಮೂಡಿಸುವ ಚಟುವಟಿಕೆಗಳು

ಅಭಿನಯ ಗೀತೆಗಳು ಮತ್ತು ಕತೆಗಳು

ದೊಡ್ಡವರು ಹೇಳುವ ಕತೆಗಳ ಮೂಲಕ ಮಕ್ಕಳಿಗೆ ಎಳೆಯ ವಯಸ್ಸಿನಲ್ಲಿ ಪರಿಸರದ ಬಗ್ಗೆ ಆಸಕ್ತಿ ಮೂಡುತ್ತದೆ. ಈ ಕತೆಗಳಲ್ಲಿ ಪ್ರಾಣಿಗಳು ಮುಖ್ಯ ಪಾತ್ರವಾಗಿರುತ್ತವೆ. ಅಂಗನವಾಡಿ ಶಿಕ್ಷಕಿಯರು, ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿ ಸುಲಭವಾಗಿ ತಿಳಿಹೇಳಲು ಬೋಧನೆಯ ಸಮರ್ಥ ಮಾಧ್ಯಮವಾಗಿ ಈ ಕತೆಗಳು ಮತ್ತು ಹಾಡುಗಳನ್ನು ಬಳಸಿಕೊಂಡು ಮುಂದು–ವರಿಯುತ್ತಾರೆ. ಈ ಮೂಲಕ ಮಕ್ಕಳು ಪ್ರಾಣಿಗಳ ಸ್ವರೂಪ, ಗುಣಲಕ್ಷಣ, ಸ್ವಭಾವ, ಆಹಾರ, ಹವ್ಯಾಸ ಇತ್ಯಾದಿಗಳನ್ನು

ಕಲಿಯುತ್ತಾರೆ. ಪ್ರಕೃತಿಯನ್ನು ಇನ್ನಷ್ಟು ತಿಳಿದುಕೊಳ್ಳಲು ಇದು ಮಕ್ಕಳನ್ನು ಪ್ರೇರೇಪಿಸುತ್ತದೆ.

ಹೊರಸಂಚಾರ ಮತ್ತು ಕ್ಷೇತ್ರ ಭೇಟಿಗಳು

ವಿಷಯವನ್ನು ಆಧರಿಸಿ, ಶಿಕ್ಷಕಿಯರು ಮಕ್ಕಳನ್ನು ಪಕ್ಕದ ಜಮೀನಿಗೋ, ಜಾನುವಾರುಗಳ ಕೊಟ್ಟಿಗೆಗೋ, ಉದ್ಯಾನವನಕ್ಕೋ ಕರೆದೊಯ್ದು, ನಿರ್ದಿಷ್ಟ ವಿಷಯದ ಬಗ್ಗೆ ಮಕ್ಕಳು ಸ್ವಯಂ ಅನುಭವದೊಂದಿಗೆ ವಿವರವಾದ ಮಾಹಿತಿಯನ್ನು ಪಡೆದುಕೊಳ್ಳುವಂತೆ ಮಾಡುತ್ತಾರೆ. ಉದಾಹರಣೆಗೆ, ಬೀಜದಿಂದ ಗಿಡ ರೂಪುಗೊಳ್ಳುವ ವಿವಿಧ ಹಂತಗಳನ್ನು ವಿವರಿಸುವ ಬದಲು ಶಿಕ್ಷಕಿ, ಪಕ್ಕದ ತೋಟಕ್ಕೆ ಕರೆದೊಯ್ದು ಆ ಪ್ರಕ್ರಿಯೆಯನ್ನು ಮಕ್ಕಳಿಗೆ ಪ್ರತ್ಯಕ್ಷವಾಗಿ ತೋರಿಸಿ ಅರ್ಥ ಮಾಡಿಸುತ್ತಾರೆ. ಅಲ್ಲದೆ, ಧಾನ್ಯಗಳು ಅಥವಾ ತರಕಾರಿಗಳನ್ನು ಬೆಳೆಯುವ ವಿಧಾನವನ್ನೂ ತೋರಿಸುತ್ತಾರೆ. ಮಕ್ಕಳು ಈ ವೇಳೆ ಸಮುದಾಯದ ಹಿರಿಯರೊಂದಿಗೆ ಮಾತನಾಡುತ್ತಲೇ ಇನ್ನಷ್ಟು ಮಾಹಿತಿಯನ್ನು ತಿಳಿದು-ಕೊಳ್ಳುತ್ತಾರೆ. ಗಿಡಗಳಿಂದ ಎಲೆ, ಹೂವುಗಳನ್ನು ಕೀಳಬಾರದು, ಯಾವುದೇ ಪ್ರಾಣಿಗಳಿಗೆ ಕಲ್ಲು ಎಸೆಯಬಾರದು ಎಂದು ಪರಿಸರ ನಡಿಗೆಗೆ ಹೋಗುವುದಕ್ಕೂ ಮೊದಲೇ ಶಿಕ್ಷಕಿ ಎಚ್ಚರಿಕೆ ಕೊಟ್ಟಿರುತ್ತಾರೆ. ಇದು ಪರಿಸರ ಕಾಳಜಿ ಮತ್ತು ಸಂವೇದನೆಯ ಮೊದಲ ಪಾಠವಾಗಿರುತ್ತದೆ.

ಪರಿಸರ ನಡಿಗೆ ಎಂಬುದು ಮಕ್ಕಳಿಗೆ ಅಚ್ಚರಿಯ ಮೂಟೆ. ಪ್ರತಿ ಹೆಜ್ಜೆಯಲ್ಲೂ ಅವರಿಗೆ ಎದುರಾಗುವ ಕುತೂಹಲಗಳು, ಪ್ರಶ್ನೆಗಳು, ತನಿಖಾತ್ಮಕ ವಿವರಗಳನ್ನು ಅವರು ತಮ್ಮ ಶಿಕ್ಷಕಿಗೆ ಕೇಳುತ್ತಾರೆ. ಹೀಗೆ, ಪರಿಸರ ನಡಿಗೆಯ ಮೂಲಕ ಹಲವಾರು ಹೊಸತುಗಳನ್ನು ಕಲಿಯಲು ಅವಕಾಶ ಒದಗಿಸುತ್ತದೆ. ಬಗೆಬಗೆಯ ಆಕಾರದ ಗಿಡ ಮರಗಳನ್ನು ನೋಡಿದಾಗ ಪ್ರಕೃತಿಯಲ್ಲಿನ ವೈವಿಧ್ಯತೆಯು ಅವರಲ್ಲಿ ಮೆಚ್ಚುಗೆಗೆ ಕಾರಣವಾಗುತ್ತದೆ. ಪರಿಸರ ನಡಿಗೆಗಾಗಿ ಹೊರಹೋದಾಗ ಪರಿಸರದಲ್ಲಿನ ಹಲವಾರು ಸಂಗತಿಗಳನ್ನು ಮುಕ್ತ ಮನಸ್ಸಿನಿಂದ ಗಮನಿಸುತ್ತಾರೆ. ಪ್ರಕೃತಿಯ ಮಧ್ಯೆಯೇ ಪ್ರಾಣಿಗಳನ್ನು ನೋಡುವಾಗ ಮತ್ತು ಪ್ರಕೃತಿ ಸೌಂದರ್ಯವನ್ನು ಸವಿಯುವಾಗ ಅವರು ಸಹಜ ಸುಂದರ ಜಗತ್ತನ್ನು ಮೆಚ್ಚಿಕೊಳ್ಳುವ ಮತ್ತು ಮೋಜಿನೊಂದಿಗೆ ಕಲಿಯುವ ಅನುಭವವನ್ನು ಪಡೆಯುತ್ತಾರೆ.

| ಪೂರ್ವ ಪ್ರಾಥಮಿಕ 1 | ಪೂರ್ವ ಪ್ರಾಥಮಿಕ 2 | ಪೂರ್ವ ಪ್ರಾಥಮಿಕ 3 (ಬಾಲವಾಟಿಕ) |
|---|---|---|
| **ಐಎಲ್ 1.1**<br>ಪರಿಸರವನ್ನು ಗಮನಿಸಲು ಮತ್ತು ಅನ್ವೇಷಿಸಲು ಎಲ್ಲ ಇಂದ್ರಿಯಗಳನ್ನು ಬಳಸುತ್ತಾರೆ. | **ಐಎಲ್ 2.1**<br>ಪಂಚೇಂದ್ರಿಯಗಳ ಮೂಲಕ ಪರಿಸರವನ್ನು ಗಮನಿಸುತ್ತಾರೆ ಮತ್ತು ಅನ್ವೇಷಿಸುತ್ತಾರೆ. | **ಐಎಲ್ 3.1**<br>ಎಲ್ಲಾ ಇಂದ್ರಿಯಗಳನ್ನು ಬಳಸಿ ಪರಿಸರವನ್ನು ಗಮನಿಸುತ್ತಾರೆ ಮತ್ತು ಅನ್ವೇಷಿಸುತ್ತಾರೆ. |
| **ಐಎಲ್ 1.2**<br>ತಮ್ಮ ಸುತ್ತಲಿನ ಸಾಮಾನ್ಯ ವಸ್ತುಗಳು, ಶಬ್ದಗಳು, ಜನರು, ಚಿತ್ರಗಳು, ಪ್ರಾಣಿಗಳು, ಹಕ್ಕಿಗಳು ಮತ್ತು ಸನ್ನಿವೇಶಗಳನ್ನು ಗುರುತಿಸುವುದು ಮತ್ತು ಹೆಸರಿಸುವುದು. | **ಐಎಲ್ 2.2**<br>ತಮ್ಮ ಸುತ್ತಲಿನ ವಸ್ತುಗಳು, ಶಬ್ದಗಳು, ಜನರು, ಚಿತ್ರಗಳು, ಪ್ರಾಣಿಗಳು, ಹಕ್ಕಿಗಳು ಮತ್ತು ಸನ್ನಿವೇಶಗಳು ಇತ್ಯಾದಿಗಳನ್ನು ವಿವರಿಸುವುದು. | **ಐಎಲ್ 3.2**<br>ತಮ್ಮ ಸುತ್ತಲಿನ ವಸ್ತುಗಳು, ಶಬ್ದಗಳು, ಜನರು, ಚಿತ್ರಗಳು, ಪ್ರಾಣಿಗಳು, ಹಕ್ಕಿಗಳು ಮತ್ತು ಸನ್ನಿವೇಶಗಳು, ಇತ್ಯಾದಿಗಳ ಸೂಕ್ಷ್ಮ ವಿವರಗಳನ್ನು ತಕ್ಷಣದಲ್ಲಿಯೇ ಗಮನಿಸುವುದು ಮತ್ತು ವಿವರಿಸುವುದು. |

**ಚಿತ್ರ 2: ಪರಿಸರ ನಡಿಗೆಯಿಂದ ಮಕ್ಕಳು ಹಲವಾರು ಕಲಿಕೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.**

**IL: Involved Learner* ತಲ್ಲೀನ ಕಲಿಕಾರ್ಥಿ



ಚಿತ್ರ 3: ಪರಿಸರ ನಡಿಗೆ ವೇಳೆ ಮಕ್ಕಳು ಮೇಕೆಗಳನ್ನು(ಆಡು) ಗಮನಿಸುತ್ತಿರುವುದು



ಚಿತ್ರ 4 : ಪರಿಸರ ನಡಿಗೆಯ ವೇಳೆ ಶಿಕ್ಷಕಿ ಮನೆಯ ಹತ್ತಿರವಿರುವ ಕೈತೋಟಕ್ಕೆ ಮಕ್ಕಳನ್ನು ಕರೆದೊಯ್ದು, ಅವರಿಗೆ ಸಸ್ಯದ ವಿವಿಧ ಭಾಗಗಳನ್ನು ವಿವರಿಸುತ್ತಿರುವುದು. ಮಕ್ಕಳು ಸಸ್ಯಗಳನ್ನು ಸ್ಪರ್ಶಿಸುತ್ತಾ ತಮಗಾದ ಅನುಭವವನ್ನು ಆನಂದಿಸುತ್ತಿರುವ ದೃಶ್ಯ

## ಕೈತೋಟ

ಪೋಷಣಾ ಅಭಿಯಾನ (Poshan Abhiyan) ಉಪಕ್ರಮದ ಅಂಗವಾಗಿ, ಅಂಗನವಾಡಿ ಕೇಂದ್ರಗಳ ಆವರಣದಲ್ಲಿ ಹಣ್ಣು ಮತ್ತು ತರಕಾರಿ ಗಿಡಗಳ ಕೈತೋಟ ನಿರ್ಮಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪ್ರೋತ್ಸಾಹಿಸುತ್ತಿದೆ. ಮಕ್ಕಳು ತಾವೇ ಸ್ವತಃ ಕೆಲಸ ಮಾಡುವ ಮೂಲಕ ಬಹಳ ಚೆನ್ನಾಗಿ ಕಲಿಯುತ್ತಾರೆ. ಕೈತೋಟ ಅಥವಾ ಕಿಚನ್‌ಗಾರ್ಡನ್ ನಿರ್ಮಾಣದಲ್ಲಿ ಮಕ್ಕಳನ್ನೂ ಸೇರಿಸಿಕೊಳ್ಳುವುದರಿಂದ ಅವರು ಗಿಡಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುತ್ತಾರಲ್ಲದೆ, ಅವುಗಳ ಪೋಷಣೆ ಮತ್ತು ಕಾಳಜಿಯ ಜವಾಬ್ದಾರಿಯನ್ನೂ ತೆಗೆದುಕೊಳ್ಳುತ್ತಾರೆ. ಗಿಡಗಳು ಹೇಗೆ ಬೆಳೆಯುತ್ತವೆ ಎಂಬುದನ್ನು ವಿವರಿಸಲು ಶಿಕ್ಷಕಿ ಮಕ್ಕಳಿಗೆ ಒಂದು ಚಟುವಟಿಕೆಯನ್ನು ಹಮ್ಮಿಕೊಳ್ಳುತ್ತಾರೆ. ಈ ಚಟುವಟಿಕೆಯಲ್ಲಿ, ಪ್ರತಿ ಮಕ್ಕಳನ್ನೂ ನೆಲದಲ್ಲಿ ಬಿತ್ತಲಾಗಿರುವ ಒಂದೊಂದು ಬೀಜಗಳೆಂದು ಸಂಬೋಧಿಸುತ್ತಾರೆ. ’ಪ್ರತಿಯೊಬ್ಬರೂ ಚೆಂಡಿನಾಕಾರದಲ್ಲಿ ತಮ್ಮನ್ನು ತಾವು ಸುತ್ತಿಕೊಳ್ಳಬೇಕೆಂದು ಹೇಳುತ್ತಾರೆ. ಸೂರ್ಯನು ಬೆಳಗಿದ ನಂತರ ಮಳೆಯಾಗುತ್ತದೆ ಎಂದು ಶಿಕ್ಷಕಿ ಹೇಳುತ್ತಾರೆ. ಪ್ರತೀ ಸಲ ಮಳೆ ಬರುತ್ತಿದೆ ಎಂದು ಶಿಕ್ಷಕಿ ಹೇಳಿದಾಗ ಮಕ್ಕಳು ಸ್ವಲ್ಪವೇ ಚಲಿಸಿ ಮತ್ತು ಸುರುಳಿಯಾಕಾರದಲ್ಲಿ ಸುತ್ತಿಕೊಂಡಿರುವುದನ್ನು ಸಡಿಲಗೊಳಿಸಬೇಕು. ಬಳಿಕ, ’ಈಗ ಬೀಜ ಮೊಳಕೆಯೊಡೆಯಲಾರಂಭಿಸಿದೆ’ ಎಂದು ಹೇಳಿದಾಗ ಮಕ್ಕಳು ಸ್ವಲ್ಪ ಸ್ವಲ್ಪವೇ ತಮ್ಮ ತಲೆಯನ್ನು ಎತ್ತುವಂತೆ ಮತ್ತು ಮೊಳಕೆಯೊಡೆದ ಬೀಜ ಈಗ ನೆಲದಿಂದ ಹೊರಬಂದು ಪುಟಾಣಿ ಗಿಡವಾಗುತ್ತಿದೆ ಎಂದು ಶಿಕ್ಷಕಿ ಹೇಳುತ್ತಾರೆ. ಬಳಿಕ, ಗಿಡ ಕ್ರಮೇಣ ಎತ್ತರೆತ್ತರಕ್ಕೆ ಬೆಳೆಯುತ್ತಿದೆ ಎಂದು ಸೂಚಿಸಿದಾಗ ಮಕ್ಕಳೆಲ್ಲರನ್ನೂ ನಿಧಾನವಾಗಿ ಎದ್ದು ನಿಲ್ಲುವಂತೆ ಹೇಳಿದರು. ಮಕ್ಕಳು ಎದ್ದುನಿಂತರು. ರೆಂಬೆಗಳು ಬೆಳೆಯುತ್ತಿರುವ ದ್ಯೋತಕವಾಗಿ ಮಕ್ಕಳು ತಮ್ಮ ಎರಡೂ ಕೈಗಳನ್ನು ಎರಡೂ ಬದಿಗೆ ಚಾಚುವಂತೆ ಹೇಳಲಾಗುತ್ತದೆ. ಬಿಗಿದ ಮುಷ್ಟಿಯನ್ನು ಹೊಂದಿರುವ ಮಕ್ಕಳು, ಹೂವೊಂದು ಅರಳುತ್ತಿರುವುದನ್ನು ಸೂಚಿಸಲು ತಮ್ಮ ಬೆರಳುಗಳನ್ನು

ನಿಧಾನವಾಗಿ ತೆರೆಯಲು ಸೂಚನೆ ನೀಡಿದರು. ಇಂತಹ ಚಟುವಟಿಕೆಗಳ ಮೂಲಕ, ಗಿಡಗಳೂ ತಮ್ಮಂತೆ ಜೀವಂತ ಇರುವುದನ್ನು ಹಾಗೂ ಅವುಗಳ ಬಗ್ಗೆ ಕಾಳಜಿ ವಹಿಸಿ, ರಕ್ಷಿಸಬೇಕು ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳುತ್ತಾರೆ. ಇದಾದ ಬಳಿಕ ಶಿಕ್ಷಕಿ, ಪ್ರತಿಯೊಬ್ಬ ಮಕ್ಕಳೂ ಬೀಜ ನೆಟ್ಟು ಗಿಡ ಬೆಳೆಸಿ, ಅದು ದೊಡ್ಡದಾಗುವವರೆಗೂ ಅದನ್ನು ಕಾಳಜಿಯಿಂದ ಪೋಷಿಸುವಂತೆ ತಿಳಿಸುತ್ತಾರೆ. ಪ್ರತಿ ಮಗುವಿಗೂ ಜಮೀನಿನಲ್ಲಿ ಸಣ್ಣ ಜಾಗವನ್ನು ವಹಿಸಿಕೊಟ್ಟು, ಸಣ್ಣ ಕೋಲಿನ ಮೂಲಕ ಮಣ್ಣನ್ನು ಹದಗೊಳಿಸುವಂತೆ ಸೂಚಿಸಿದರು. ನಂತರ, ಪ್ರತಿ ಮಗುವಿಗೂ ಬೀಜ ಕೊಟ್ಟು, ಅದನ್ನು ಅಂಗಳದಲ್ಲಿ ನೆಟ್ಟು, ಮಣ್ಣು, ನೀರು ಹಾಕಿ ಬೆಳೆಸುವಂತೆ ಶಿಕ್ಷಕಿ ತಿಳಿಸುತ್ತಾರೆ. ಪ್ರತಿದಿನ ತಮ್ಮ ತಮ್ಮ ಗಿಡಗಳಿಗೆ ನೀರುಣಿಸಿ ಬೀಜ ಮೊಳಕೆಯೊಡೆಯುವುದನ್ನು ಕಾದು ನೋಡುವಂತೆಯೂ ಹೇಳುತ್ತಾರೆ. ಪ್ರತಿ ವಾರವೂ ಮುಕ್ತ ಚರ್ಚೆಯ ವೇಳೆ ಮಕ್ಕಳ ಬಳಿ ಅವರವರ ಗಿಡಗಳ ಬೆಳವಣಿಗೆಯ ಹಂತಗಳ ಬಗ್ಗೆ ಶಿಕ್ಷಕರು ವಿಚಾರಿಸುವಾಗ ಮಕ್ಕಳು ಬಹಳ ಆಸಕ್ತಿಯಿಂದ ವಿವರಗಳನ್ನು ಹಂಚಿಕೊಳ್ಳುತ್ತಾರೆ.

ಶಿಕ್ಷಕಿಯರು ತಮ್ಮ ಕೈತೋಟವನ್ನು ಕೇಂದ್ರೀಕರಿಸಿದ ಇತರ ಚಟುವಟಿಕೆಗಳನ್ನೂ ಹಮ್ಮಿಕೊಳ್ಳುತ್ತಾರೆ. ಅಂದರೆ, ಬೀಜ ಮೊಳಕೆಯೊಡೆದು ಗಿಡವಾಗಿ ಬೆಳೆಯುವ ವಿವಿಧ ಹಂತಗಳ ಚಿತ್ರ ಬಿಡಿಸುವಂತೆ ಮಕ್ಕಳಿಗೆ ಹೇಳುತ್ತಾರೆ. ಮಕ್ಕಳ ಪೋಷಕರು ಪ್ರತಿ ತಿಂಗಳು ನಡೆಯುವ ಆರಂಭಿಕ ಬಾಲ್ಯ ಕಾಳಜಿ ಮತ್ತು ಶಿಕ್ಷಣ ದಿನದಂದು (ECCE Day) 'ಪೋಷಕ–ಶಿಕ್ಷಕರ ಸಭೆ'ಗೆ ಬಂದಾಗ ತಮ್ಮ ತಮ್ಮ ಗಿಡಗಳನ್ನು ಪೋಷಕರಿಗೆ ತೋರಿಸುವಂತೆ ಶಿಕ್ಷಕಿಯರು ಉತ್ತೇಜಿಸುತ್ತಾರೆ. ಕೈತೋಟದಿಂದ ಮಕ್ಕಳೊಂದಿಗೆ ತರಕಾರಿ, ಹಣ್ಣು, ಕಿತ್ತು ಮಧ್ಯಾಹ್ನದ ಬಿಸಿಯೂಟ ತಯಾರಿಸಲು ಅವುಗಳನ್ನು ಬಳಸಲಾಗುತ್ತದೆ. ತಮ್ಮ ಊಟದಲ್ಲಿ ತಾವೇ ಬೆಳೆದ ತರಕಾರಿಗಳನ್ನು ನೋಡುವುದು ಮತ್ತು ಸೇವಿಸುವುದೇ ಮಕ್ಕಳಿಗೆ ಮಹದಾನಂದ. ಕಿಚನ್‌ಗಾರ್ಡನ್‌ನಲ್ಲಿ ಗಿಡಗಳನ್ನು ಬೆಳೆಸುವ, ಮಕ್ಕಳೇ ಸ್ವತಃ ನೀರುಣಿಸುವ ಮತ್ತು ಬೆಳವಣಿಗೆಯ ಹಂತಗಳನ್ನು ಗಮನಿಸುವ ಈ ಪ್ರಯೋಗವು ಗಿಡ ಮತ್ತು ಮರಗಳ ಬೆಳವಣಿಗೆಯ ಪ್ರಕ್ರಿಯೆಯ ಬಗ್ಗೆ ನಿಖರ ಮಾಹಿತಿಯನ್ನು ಮಕ್ಕಳಿಗೆ ಒದಗಿಸುತ್ತದೆ ಮತ್ತು ಮಗುವಿನ ಸಂಜ್ಞಾನಾತ್ಮಕ ಬೆಳವಣಿಗೆಗೆ (cognitive development) ಇದು ನೆರವಾಗುತ್ತದೆ. ಕೈತೋಟದಲ್ಲಿ ಕೆಲಸ ಮಾಡುವುದು ಮೋಟಾರ್ ಕೌಶಲಗಳ ಬೆಳವಣಿಗೆಗೂ ಸಹಕಾರಿ. ಗಿಡಗಳ ಬೆಳವಣಿಗೆಗಾಗಿ ಕಾಯುವಿಕೆ, ತಾಳ್ಮೆ ಮತ್ತು ಪರಿಶ್ರಮವನ್ನು ಕಲಿಸಿದರೆ, ಏಕಾಗ್ರತೆ ಮತ್ತು ಗಮನ ಕೇಂದ್ರೀಕರಿಸುವುದನ್ನು ಕೂಡ ಕಲಿಸುತ್ತದೆ. ಈ ಪ್ರಕ್ರಿಯೆಯು ಮಕ್ಕಳಲ್ಲಿ ಜವಾಬ್ದಾರಿಯ ಪ್ರಜ್ಞೆ ಮತ್ತು ಸಾಧಿಸುವ ಗುಣ, ಗಿಡಗಳ ಬಗ್ಗೆ ಕಾಳಜಿ, ಆ ಮೂಲಕ ಕ್ರಮೇಣ ಪ್ರಾಕೃತಿಕ ಪರಿಸರವನ್ನು ರಕ್ಷಿಸುವ ನಿಟ್ಟಿನಲ್ಲಿ ಅವರನ್ನು ಉತ್ತೇಜಿಸುತ್ತದೆ.

## ಉಪಸಂಹಾರ

ಸಣ್ಣ ವಯಸ್ಸಿನಲ್ಲೇ ಪ್ರಕೃತಿ ಜೊತೆ ಬೆರೆಯುವುದರಿಂದ ಮಕ್ಕಳಿಗೆ ತಮ್ಮ ಸುತ್ತಮುತ್ತಲಿನ ಪರಿಸರದೊಂದಿಗೆ ನಂಟು ಬೆಳೆಯುತ್ತದೆ. ನಿತ್ಯವೂ ಯಾವುದನ್ನು ನೋಡುತ್ತಾ ಕಲಿಯುತ್ತಾರೋ ಅದರೊಂದಿಗೆ ತಾವು ಈಗಾಗಲೇ ಕಲಿತಿರುವುದರ ಜೊತೆಗೆ ತಾಳೆ ಹಾಕುವುದು ಸುಲಲಿತವಾಗುತ್ತದೆ. ಇತರ ಶಿಕ್ಷಕರೊಂದಿಗೆ, ಮಕ್ಕಳೊಂದಿಗೆ ಮತ್ತು ಪೋಷಕರೊಂದಿಗೆ ಏನು ಕಲಿತರೋ ಅದು ಅವರಲ್ಲಿ ಸಾಮಾಜಿಕ ಕೌಶಲವನ್ನು ತುಂಬಲು ನೆರವಾಗುತ್ತದೆ. ಅವರು ವಿವಿಧ ಗಿಡಗಳ, ಪ್ರಾಣಿಗಳ ಹೆಸರು ಮತ್ತು ಅವುಗಳ ಭಾಗಗಳ ಹೆಸರು ಕಲಿಯುವಾಗ ಅವರ ಶಬ್ದ ಭಂಡಾರ ಹೆಚ್ಚಿ, ಭಾಷಾ ಕೌಶಲ ವೃದ್ಧಿಸುತ್ತದೆ. ತಮ್ಮ ಸುತ್ತಲಿನ ಪರಿಸರವನ್ನು ಅವಲೋಕಿಸುವ ಕೌಶಲವು ಮುಂದೆ ಅವರು ಪ್ರಾಥಮಿಕ ತರಗತಿಗಳಲ್ಲಿ ಎಷ್ಟು ಆಳವಾಗಿ ಕಲಿಯುತ್ತಾರೆ ಎಂಬುದರ ಪೂರ್ವಸೂಚಕವಾಗಿದೆ. ಪರಿಸರದ ಕಾಳಜಿ ಹುಟ್ಟಿಸುವುದು ಮತ್ತು ಪರಿಸರ ರಕ್ಷಣೆಯ ಚಟುವಟಿಕೆಗಳಲ್ಲಿ ಮಕ್ಕಳನ್ನು ಸಣ್ಣ ವಯಸ್ಸಿನಲ್ಲಿಯೇ ತೊಡಗಿಸುವುದರಿಂದ ಜೀವಮಾನವಿಡೀ ಅದರ ಪರಿಣಾಮ ಬೀರುತ್ತದೆ.

| | | |
|---|---|---|
| **ಐಎಲ್1.8 ಬಿ**<br>ತನ್ನ ಸುತ್ತಲಿನ ಪರಿಸರದ ಬಗ್ಗೆ ಕುತೂಹಲ ವ್ಯಕ್ತಪಡಿಸಿ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತದೆ. | **ಐಎಲ್2.8 ಬಿ**<br>ತನ್ನ ಸುತ್ತಲಿನ ಪರಿಸರದ ಬಗ್ಗೆ ಕುತೂಹಲ ವ್ಯಕ್ತಪಡಿಸಿ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು (ಸಂಬಂಧಿಸಿದ ಪರಿಕಲ್ಪನೆಗಳನ್ನು ಬೆಳೆಸುವುದು) | **ಐಎಲ್3.8 ಬಿ**<br>ಪರಿಸರದಲ್ಲಿನ ವಸ್ತುಗಳ ಬಗ್ಗೆ ತನಿಖೆ ಮಾಡುವುದು ಮತ್ತು ಕೈಚಳಕ ತೋರಿಸುವುದು, ಪ್ರಶ್ನೆಗಳನ್ನು ಕೇಳುವುದು, ವಿಚಾರಿಸುವುದು, ಪತ್ತೆ ಹಚ್ಚುವುದು ಮತ್ತು ತನ್ನದೇ ಉಪಾಯಗಳನ್ನು ಮತ್ತು ಕಲ್ಪನೆಗಳನ್ನು ಮಾಡುವುದು. |
| **ಐಎಲ್1.8 ಸಿ**<br>ಪರಿಸರದ ಕಾಳಜಿಗೆ ಸಂಬಂಧಿಸಿದಂತೆ ಜಾಗೃತಿ ಮತ್ತು ಸಂವೇದನಾಶೀಲತೆಯನ್ನು ಪ್ರದರ್ಶಿಸುವುದು (ಉದಾಹರಣೆಗೆ: ಗಿಡಗಳಿಗೆ ನೀರುಣಿಸುವುದು. | **ಐಎಲ್2.8 ಸಿ**<br>ಪರಿಸರದ ಕಾಳಜಿಗೆ ಸಂಬಂಧಿಸಿದಂತೆ ಜಾಗೃತಿ ಮತ್ತು ಸಂವೇದನಾಶೀಲತೆಯನ್ನು ಪ್ರದರ್ಶಿಸುವುದು (ಉದಾಹರಣೆಗೆ: ಗಿಡಗಳಿಗೆ ನೀರುಣಿಸುವುದು, ಹೂವುಗಳನ್ನು ಕೀಳದಿರುವುದು ಅಥವಾ ಪ್ರಾಣಿಗಳನ್ನು ನೋಯಿಸದಿರುವುದು). | **ಐಎಲ್3.8 ಸಿ**<br>ಪರಿಸರದ ಕಾಳಜಿಗೆ ಸಂಬಂಧಿಸಿದಂತೆ ಜಾಗೃತಿ ಮತ್ತು ಸಂವೇದನಾಶೀಲತೆಯನ್ನು ಪ್ರದರ್ಶಿಸುವುದು (ಉದಾಹರಣೆಗೆ: ನೀರು ವ್ಯರ್ಥ ಮಾಡದಿರುವುದು, ಬಳಸದಿರುವಾಗ ವಿದ್ಯುತ್ ದೀಪಗಳನ್ನು ಆರಿಸುವುದು ಇತ್ಯಾದಿ). |

**ಚಿತ್ರ 5: ಕೈತೋಟಕ್ಕೆ ಸಂಬಂಧಿಸಿದ ಚಟುವಟಿಕೆಗಳು ಇವುಗಳಲ್ಲಿ ಅನೇಕ ವಿಷಯಗಳನ್ನು ಕಲಿಯಲು ಮಕ್ಕಳಿಗೆ ಪ್ರೇರಣೆಯಾಗುತ್ತವೆ.**

**IL: Involved Learner* ತಲ್ಲೀನ ಕಲಿಕಾರ್ಥಿ



ಚಿತ್ರ 6: ಮಕ್ಕಳು ಕೈತೋಟದಲ್ಲಿ ಗಿಡದೊಂದಿಗೆ...

## ಪರಾಮರ್ಶನ


NAEYC. (2015). Exploring Math and Science in Preschool. National Association for the Education of Young Children.

Ministry of Human Resource Development (MHRD). (2019). School Nutrition Gardens Mid-Day Meals scheme. New Delhi. Government of India.





**ಯೋಗೇಶ್ ಜಿ.ಆರ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ, ಆರಂಭಿಕ ಬಾಲ್ಯ ಶಿಕ್ಷಣ (Early Childhood Education - ECE) ಉಪಕ್ರಮದ ಮುಂದಾಳತ್ವ ವಹಿಸಿಕೊಂಡಿದ್ದು, ತೆಲಂಗಾಣ ರಾಜ್ಯದ ಸಂಗಾರೆಡ್ಡಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಸಿಇ ಸಂಪನ್ಮೂಲ ವ್ಯಕ್ತಿಗಳ ತಂಡವನ್ನು ಕಟ್ಟಿ, ಅಂಗನವಾಡಿ ಶಿಕ್ಷಕಿಯರ ಸಾಮರ್ಥ್ಯ ವರ್ಧನೆಗಾಗಿ ಬಹುಮಾದರಿ ಕಾರ್ಯಕ್ರಮಗಳನ್ನು ರೂಪಿಸಿದ ಪ್ರಮುಖರಾಗಿದ್ದಾರೆ. ಈ ಭಾಗದಲ್ಲಿ ಫೌಂಡೇಷನ್‌ನ ಜಿಲ್ಲಾ ಸಂಸ್ಥೆಗಳಿಗೂ ಅವರು ನೆರವಾಗುತ್ತಾರೆ. ಇದಕ್ಕೂ ಮೊದಲು ಅವರು, ಫೌಂಡೇಷನ್‌ನ ಪುದುಚೆರಿ ಜಿಲ್ಲಾ ಸಂಸ್ಥೆಯ ಮೂಲಕ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಬಲವರ್ಧನೆಗಾಗಿ ಶ್ರಮಿಸಿದ್ದಾರೆ. ಶಿಕ್ಷಣ ಕ್ಷೇತ್ರ, ಮಾಹಿತಿ ತಂತ್ರಜ್ಞಾನ ಮತ್ತು ನಿರ್ವಹಣಾ ಕ್ಷೇತ್ರಗಳಲ್ಲಿ ವಿವಿಧ ಶ್ರೇಣಿಗಳ ಅವರು ಕಳೆದ 24 ವರ್ಷಗಳಿಂದ ಶ್ರಮಿಸುತ್ತಿದ್ದಾರೆ. ಅವರನ್ನು yogesh.r@azimpremjifoundation.org ಮೂಲಕ ಸಂಪರ್ಕಿಸಬಹುದು.


ಅನುವಾದ: **ರೋಹಿಣಿ ಮುಂಡಾಜೆ** | ಪರಿಶೀಲನೆ: **ಲತಾ ಕೆ.ಸಿ.**